
# ಪ್ರಾಚೀನರು ಕಂಡಂತೆ ಪೃಥ್ವಿ!



ಈಜಿಪ್ಟ್ ಪುರಾಣಗಳಲ್ಲಿ ಬರುವ ಗೆಬ್ ದೇವತೆ ಚಿತ್ರ

ಪುರಾತತ್ತ್ವ ವಸ್ತು ಸಂಗ್ರಹಾಲಯದಲ್ಲಿ ಅಟ್ಲಸ್ ಭೂಮಿಯನ್ನು ಹೊತ್ತು ಹಿಡಿದಂತೆ ಕುಳಿತಿದ್ದಾನೆ. ಇದು ಎರಡನೆಯ ಶತಮಾನದ ಶಿಲ್ಪ. ಸ್ವರ್ಗ ಭೂಮಿಯಾಯಿತು, ಅಲ್ಲಿಂದ ಮುಂದೆ ನಾವು ಕಾಣುವುದು ಮಂಡಿಯೂರಿ ಬೆನ್ನಮೇಲೆ ಭೂಮಿಯನ್ನು ಹೊತ್ತ ಅಟ್ಲಸ್‌ನನ್ನು.

## ಪುರಾಣಗಳ ಕಲ್ಪನಾವಿಲಾಸ

ಈ ಸಂಗತಿ ಗ್ರೀಕ್ ಪುರಾಣದಲ್ಲಿ ಬರುವ ಸಾವಿರಾರು ಪ್ರಸಂಗದಲ್ಲಿ ಒಂದು. ಪುರಾಣಗಳೇ ಹೀಗೆ. ವ್ಯಕ್ತಿಗಳನ್ನು ಅವರ ಶಕ್ತಿಗಳನ್ನು ವೈಭವೀಕರಿಸುತ್ತವೆ. ದೇವ–ದಾನವರ ಯುದ್ಧಪ್ರಸಂಗ ಬಹುತೇಕ ಪ್ರಪಂಚದ ಎಲ್ಲ ಪುರಾಣಗಳಲ್ಲೂ ಇದೆ. ಯುದ್ಧ, ಅಪಹರಣ, ಮೋಹ ಜೊತೆಗೆ ಷಡ್ರಸಗಳನ್ನು ಪಾತ್ರಗಳಲ್ಲಿ ಹೊರತರುತ್ತವೆ. ಹೀಗೆ ಮಾಡುವಾಗ ಸಹಜವಾಗಿಯೇ ಎಲ್ಲ ದೇಶಗಳಲ್ಲೂ ಸ್ವರ್ಗ, ಮರ್ತ್ಯ, ಪಾತಾಳ ಎಂಬ ಪರಿಕಲ್ಪನೆ ಬಂದು ಕೂಡುತ್ತದೆ; ಓದುವಾಗ ಮುದಕೊಡುತ್ತವೆ. ತಮ್ಮ ಧರ್ಮಗಳಿಗೆ ಅನುಗುಣವಾಗಿ ಅವುಗಳ ಪಾತ್ರ ಕಾರ್ಯನಿರ್ವಹಿಸುತ್ತವೆ. ಭಾರತೀಯ ಪರಿಕಲ್ಪನೆಯಲ್ಲಿ ಈ ಮೂರಕ್ಕೂ ತಕ್ಕುದಾದ ಸ್ಥಾನವಿದೆ. ಸ್ವರ್ಗ ದೇವತೆಗಳ ಸ್ವತ್ತು, ಮರ್ತ್ಯ ಮನುಷ್ಯರದು, ಇನ್ನು ಪಾತಾಳ? ಅದು ಅಗೋಚರವಾದ್ದರಿಂದ ಇಲ್ಲಿ ಕಲ್ಪನೆಗಳನ್ನು ವಿಸ್ತರಿಸಲು ನೂರಾರು ಅವಕಾಶಗಳಿವೆ.

ನಮ್ಮ ಅಷ್ಟಾದಶ ಪುರಾಣಗಳನ್ನೇ ನೋಡಿ, ಇದರಲ್ಲಿ ‘ಬ್ರಹ್ಮಾಂಡ ಪುರಾಣ’ವೂ ಒಂದು. ‘ಬಹುಶಃ ಅಷ್ಟಾದಶ ಪುರಾಣಗಳೆಲ್ಲವೂ ಒಂದನೇ ಶತಮಾನದಿಂದ ಈಚಿನವು’ ಎನ್ನುತ್ತಾರೆ ಸ್ವಾಮಿ ಹರ್ಷಾನಂದ. ಬ್ರಹ್ಮಾಂಡ ಪುರಾಣದಲ್ಲಿ ಹಿರಣ್ಯಾಕ್ಷನನ್ನು ವಿಷ್ಣು ಸಂಹರಿಸಿ ಭೂಮಿ ನೀರಿನೊಳಗೆ ಮುಳುಗಿಹೋಗಿದ್ದರಿಂದ ಅದನ್ನು ಮೇಲೆತ್ತಲು ವರಾಹವನ್ನು ಕಳಿಸುತ್ತಾನೆ. ವರಾಹವಾದರೋ ಭಾರಿ ಗಾತ್ರದ್ದು. ಹತ್ತು ಯೋಜನ ವಿಸ್ತಾರ, ನೂರು ಯೋಜನ ಉದ್ದ. ಅದೇ ಒಂದು ಮಹಾಪರ್ವತದಂತಿತ್ತು. ಮುಳುಗುತ್ತಿದ್ದ ಭೂಮಿಯನ್ನು ಎತ್ತಿ ಹಿಡಿಯಲು ಇಷ್ಟು ಶಕ್ತಿ ಬೇಕು ಎಂದು ಪುರಾಣ ರಚನೆಕಾರರು ಭಾವಿಸಿದ್ದಿರಬೇಕು. ಭೂಮಿಯನ್ನು ದೃಢವಾಗಿ ನಿಲ್ಲಿಸಲು ಪ್ರಜಾಪತಿ ಬೆಟ್ಟಗಳನ್ನು ಹುಟ್ಟುಹಾಕಿದನಂತೆ. ಸಮುದ್ರಜೀವಿಗಳಿಗೆ ಇನಿತೂ ಹಾನಿಯಾಗದಂತೆ ಸಮುದ್ರದಲ್ಲೇ ಇರಿಸಿದ ಎನ್ನುತ್ತದೆ ಈ ಪುರಾಣ. ಪೃಥ್ವಿಯನ್ನು ಎತ್ತಲು ವರಾಹ ರಸಾತಲ ಪ್ರವೇಶಿಸಿತಂತೆ. ಯಾವುದು ಈ ರಸಾತಲ? ಭೂಮಿಯೊಳಗಿನ ಏಳು ಅಧೋಲೋಕಗಳಲ್ಲಿ ಇದೂ ಒಂದು. ಕ್ರಮವಾಗಿ ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಾಲ. ಈ ಒಂದೊಂದು ಲೋಕವೂ ಹತ್ತು ಸಾವಿರ ಯೋಜನದಷ್ಟು ವಿಸ್ತಾರವಿವೆ. ಇವು ಪುರಾಣಕಲ್ಪಿತ ಅಧೋಲೋಕಗಳು. ನಾವು ಈಗ ಪಾತಾಳವನ್ನು ರೂಪಕವಾಗಿ ಬಳಸುತ್ತೇವೆ. ಬಾವಿಯ ನೀರು ‘ಪಾತಾಳಕ್ಕೆ ಹೋಗಿದೆ’ ಎನ್ನುವುದು ಸರ್ವಸಾಮಾನ್ಯ ಮಾತು. ಬಾವಿಗೆ ಬಿದ್ದ ಬಿಂದಿಗೆಗಳನ್ನು ಎತ್ತಲು ಪಾತಾಳಗಂಗೆ (ಪಾತಾಳಗರಡಿ) ಎಂಬ ಕೊಕ್ಕಿರುವ ಸಾಧನ ಬಳಸುತ್ತಿದ್ದ ಕಾಲವೂ ಇತ್ತು.

ಅಗೋಚರ ಭೂಮಿಯ ಅಂತರಾಳವನ್ನು ನಮ್ಮ ಪ್ರಾಚೀನರು ಬಗೆಬಗೆಯಲ್ಲಿ ಕಲ್ಪಿಸಿದರು. ಬ್ರಹ್ಮಾಂಡ ಪುರಾಣದಲ್ಲಿ ನಿರೂಪಿಸಿದಂತೆ ‘ಅತಲ’ ರಾಕ್ಷಸೇಂದ್ರರ ಸಾಮ್ರಾಜ್ಯ. ‘ವಿತಲ’ ಮಹಾತ್ಮ ಪ್ರಹ್ಲಾದ ನೆಲೆಸಿರುವ ಲೋಕ. ‘ಸುತಲ’ ನಾಗ–ದಾನವರು ಒಟ್ಟಿಗೇ ಇರುವ ಲೋಕ, ‘ರಸಾತಲ’ ಕಾಲನೇಮಿ, ಗಜಕರ್ಣ, ಕುಂಜರ ಎಂಬ ರಾಕ್ಷಸರು ಇರುವ ಲೋಕ. ‘ತಲಾತಲ’ ರಾಕ್ಷಸ ಪಟ್ಟಣಗಳು ಯಥೇಚ್ಛವಾಗಿ ಇರುವ ಲೋಕ, ‘ಮಹಾತಲ’ ವಾಸುಕಿ, ಸರ್ಪರಾಜನ ಆವಾಸ, ‘ಪಾತಾಳ’ ಬಲಿಚಕ್ರವರ್ತಿಯ ನಗರ, ವಿಷ್ಣು ವಾಮನನಾಗಿ ಬಲಿಯನ್ನು ತುಳಿದದ್ದು ಪಾತಾಳಕ್ಕೆ. ಈ ಕಲ್ಪನೆಗಳನ್ನೆಲ್ಲ ಯಾರು ಯಾರಿಗೆ ಹೇಳಿದರು ಎನ್ನುವುದು ಕೂಡ ಕುತೂಹಲಕಾರಿಯೇ. ಮೊದಲು ಬ್ರಹ್ಮ–ವಸಿಷ್ಠನಿಗೆ, ವಸಿಷ್ಠ–ಪರಾಶರನಿಗೆ, ಅವನು ಜಾತೂಕರ್ಣ್ಯನಿಗೆ, ಅವನು ದ್ವೈಪಾನನಿಗೆ, ಈತ ಐದು ಜನ ತನ್ನ ಶಿಷ್ಯಂದಿರಿಗೆ (ಜೈಮಿನಿ, ಸುಮಂತು, ವೈಶಂಪಾಯನ, ಪೈಲಪ, ರಮಹರ್ಷಣ) ಅಲ್ಲಿಂದ ಸೂತಮುನಿಗಳಿಗೆ, ಎಲ್ಲೂ ಲೋಪ ಬರದಂತೆ ಕಥೆ ಒಬ್ಬರಿಂದ ಇನ್ನೊಬ್ಬರಿಗೆ ತಟಾಯಿಸಿದೆ.